



# ಶತಾಯುಷಿ ಅಜ್ಜಿಗೆ ಪತ್ರ ಬರೆಯುವಿರಾ?

ಹೆಲನ್ ಎನ್ನುವ ಅಮೆರಿಕದ ಅಜ್ಜಿಯ ಬಳಿ ಪೋಸ್ಟ್ ಕಾರ್ಡ್‌ಗಳ ದೊಡ್ಡ ಸಂಗ್ರಹವಿದೆ. ಆದರೂ ಹೊಸ ಕಾರ್ಡ್‌ಗಳಿಗಾಗಿ ಆಕೆ ಕಾಯುತ್ತಲೇ ಇದ್ದಾಳೆ.

■ ಡಿ.ಜಿ.ಮಲ್ಲಿಕಾರ್ಜುನ

ಈಕೆಯ ಹೆಸರು ಹೆಲನ್. ಅಮೆರಿಕದಲ್ಲಿ ಹಿರಿಯ ನಾಗರಿಕರನ್ನು ನೋಡಿಕೊಳ್ಳುವ 'ಲಿವಿಂಗ್ ಕಮ್ಯೂನಿಟಿ'ಯಲ್ಲಿ ಅವರ ವಾಸ. ಜನ್ಮ ದಿನಾಂಕ ಮಾರ್ಚ್ 3, 1917. ಕಳೆದ ಮಾರ್ಚ್ ತಿಂಗಳಲ್ಲಿ 101ನೇ ವರ್ಷಕ್ಕೆ ಕಾಲಿಟ್ಟಿದ್ದಾರೆ. ಅದರಲ್ಲೇನು ವಿಶೇಷ ಅನ್ನುವಿರಾ? ವಿಶೇಷ ಇರುವುದು, ಕುಂದದ ಉತ್ಸಾಹದ ಚಿಲುಮೆಯಂತಿರುವ ಈ ಅಜ್ಜಿಯ ಪೋಸ್ಟ್ ಕಾರ್ಡ್ ಹವ್ಯಾಸ.

'ಪೋಸ್ಟ್ ಕ್ರಾಸಿಂಗ್' ಎಂಬ ವೆಬ್‌ಸೈಟ್ ಸದಸ್ಯೆಯಾಗಿರುವ ಅಜ್ಜಿಗೆ ಹಲವು ದೇಶಗಳಿಂದ ಬಣ್ಣಬಣ್ಣದ ಪೋಸ್ಟ್ ಕಾರ್ಡ್‌ಗಳು ಬರುತ್ತವೆ. ಅವುಗಳನ್ನು ಅಜ್ಜಿ ಒಪ್ಪವಾಗಿ ಆಲ್ಬಮ್‌ನಲ್ಲಿ ಜೋಡಿಸಿಟ್ಟುಕೊಳ್ಳುವರು. ಆ ವೆಬ್‌ಸೈಟ್ ನೀಡುವ ವಿಳಾಸಗಳಿಗೆ ಅಜ್ಜಿಯೂ ನಿಯಮಿತವಾಗಿ ಕಾರ್ಡ್‌ಗಳನ್ನು ಕಳುಹಿಸುವರು. ಪೋಸ್ಟ್ ಕಾರ್ಡ್ ಕಳುಹಿಸಲು ಅಜ್ಜಿಗೆ ಕೆರೋಲಿನ್ ಎಂಬ ಸ್ವಯಂಸೇವಕಿ ನೆರವಾಗುತ್ತಾರೆ. 'ನನಗೆ ಬರೆಯಲು ಕಷ್ಟವಾಗುತ್ತೆ, ಮತ್ತು ಬರೆದದ್ದು ಅರ್ಥವಾಗದಿರಬಹುದು. ಅದಕ್ಕಾಗಿ ನಾನು ಹೇಳಿದ್ದನ್ನು ಕೆರೋಲಿನ್ ಬರೆಯುವಳು. ನಾನು ಸಹಿ ಮಾಡುತ್ತೇನೆ' ಎನ್ನುತ್ತಾರೆ ಅಜ್ಜಿ.

'ಪೋಸ್ಟ್ ಕ್ರಾಸಿಂಗ್ ಡಾಟ್ ಕಾಮ್' ಎಂಬ ವೆಬ್‌ಸೈಟ್‌ನಲ್ಲಿ ಸೈನ್‌ಇನ್ ಆದವರಿಗೆ ಐದು ವಿಳಾಸಗಳನ್ನು ನೀಡಲಾಗುತ್ತದೆ. ಪ್ರತಿ ವಿಳಾಸದ ಜೊತೆಯಲ್ಲಿ ಪೋಸ್ಟ್ ಕಾರ್ಡ್ ಐಡಿ ಸಂಖ್ಯೆ ಕೂಡ ಇರುತ್ತದೆ. ಐದು ಪೋಸ್ಟ್ ಕಾರ್ಡ್‌ಗಳನ್ನು ಐದು ವಿಳಾಸಗಳಿಗೆ ಐಡಿ ಸಂಖ್ಯೆ ನಮೂದಿಸಿ ಪೋಸ್ಟ್ ಮಾಡಬೇಕು. ಆಯಾ ವಿಳಾಸಕ್ಕೆ ಅದು ತಲುಪುತ್ತಿದ್ದಂತೆಯೇ ವೆಬ್‌ಸೈಟ್‌ನಲ್ಲಿ ಅವರು ತಮಗೆ ಬಂದ ಕಾರ್ಡ್ ಮೇಲಿನ ಐಡಿ ಸಂಖ್ಯೆ ನಮೂದಿಸುತ್ತಾರೆ. ಆ ನಂತರ ಪೋಸ್ಟ್ ಕಾರ್ಡ್ ಕಳುಹಿಸಿದವರ ವಿಳಾಸವನ್ನು ಮತ್ತೊಬ್ಬರಿಗೆ ನೀಡಲಾಗುತ್ತದೆ. ತಿಳಿಯದ ಅಜ್ಞಾತ ಸ್ಥಳದಿಂದ ಪೋಸ್ಟ್ ಕಾರ್ಡ್ ಬರಲು ಪ್ರಾರಂಭವಾಗುತ್ತದೆ. ಅಲ್ಲಿ ಪೋಸ್ಟ್ ಕಾರ್ಡ್ ತಲುಪುತ್ತಿದ್ದಂತೆಯೇ ಇತ್ತ ಹೊಸ ವಿಳಾಸವನ್ನು ನೀಡಲಾಗುತ್ತದೆ. ಹೀಗೆ ಪೋಸ್ಟ್ ಕಾರ್ಡ್ ಸರಪಳಿ ಬೆಳೆಯುತ್ತಾ ಹೋಗುತ್ತದೆ.

'ನಾನು ಶಾಲೆಗೆ ಹೋಗುತ್ತಿದ್ದಾಗ ಸ್ನೇಹಿತೆಯರಿಗೆ ಸಾಕಷ್ಟು ಪತ್ರಗಳನ್ನು ಬರೆಯುತ್ತಿದ್ದೆ. ಪತ್ರ ಬರವಣಿಗೆ ನನಗೆ ತುಂಬಾ ಖುಷಿ ಕೊಡುತ್ತಿತ್ತು. ಕೆಲವಾರು ತಿಂಗಳ ಹಿಂದೆ 'ಪೋಸ್ಟ್ ಕ್ರಾಸಿಂಗ್' ಎಂಬ ವೆಬ್‌ಸೈಟ್ ಬಗ್ಗೆ ತಿಳಿಯಿತು. ಕೆರೋಲಿನ್ ಸಹಾಯದಿಂದ ಅದರ ಸದಸ್ಯೆಯಾದೆ. ಅದರ ಮೂಲಕ ನನಗೆ ವಿಳಾಸಗಳು ಸಿಗುತ್ತವೆ. ವಿಳಾಸದ ಚೀಟಿಯನ್ನು ಕೆರೋಲಿನ್ ಕಾರ್ಡ್‌ಗಳಿಗೆ ಅಂಟಿಸುತ್ತಾಳೆ, ನಂತರ ನಾನು ಹೇಳಿದ್ದನ್ನು ಬರೆದು ನನ್ನಿಂದ ಸಹಿ ಪಡೆದು ಪೋಸ್ಟ್ ಮಾಡುವಳು. ಅದೇ ರೀತಿ ನಮಗೆ ಬರುವ ಕಾರ್ಡುಗಳ ಮೇಲಿನ ಸಂಖ್ಯೆಯನ್ನು ವೆಬ್‌ಸೈಟ್‌ನಲ್ಲಿ ರಿಜಿಸ್ಟರ್ ಮಾಡಿ ಕೊಡುತ್ತಾಳೆ. ನಾನು ಕಾರ್ಡುಗಳನ್ನು ಜೋಪಾನ ಮಾಡುತ್ತೇನೆ' ಎಂದು ಹೆಲನ್ ಅಜ್ಜಿ ತಮ್ಮ ಹವ್ಯಾಸದ ಕುರಿತು ಹೇಳುತ್ತಾರೆ.

'ನಾವು ಸಣ್ಣವರಾಗಿದ್ದಾಗ ಕುದುರೆ ಗಾಡಿಗಳಲ್ಲಿ ಅಂಚೆ ಸಾಗಾಟ ನಡೆಯುತ್ತಿತ್ತು. ನಂತರ ಬರುತ್ತಿದ್ದುದು ವಿಪರೀತ ಶಬ್ದ ಮಾಡುತ್ತಿದ್ದ ಫೋರ್ಡ್ ಕಾರು. ಪತ್ರಗಳು ನೀಡುವ ಸಂತೋಷ ಬಣ್ಣಿಸಲಾಗದು. ಪತ್ರ ಬರೆಯುತ್ತಿದ್ದ ನನ್ನ ಸಮಕಾಲೀನರು ಈಗ ಯಾರೂ ಬದುಕಿಲ್ಲ. ಇಷ್ಟು ಕಾಲದ ನಂತರ ಈಗ ನಾನಿರುವಲ್ಲಿ ನನಗೆ ಪೋಸ್ಟ್ ಕಾರ್ಡ್ ಬರುವುದನ್ನು ಇಲ್ಲಿನ ಎಲ್ಲರೂ ಅಚ್ಚರಿ–ಮೆಚ್ಚುಗೆಯಿಂದ ಗಮನಿಸುತ್ತಾರೆ. ಏಕೆಂದರೆ ಈಗ ಯಾರಿಗೂ ಪತ್ರಗಳೇ ಬರುವುದಿಲ್ಲವಲ್ಲ. ನನ್ನ ಮಗ ಮತ್ತು ಮಗಳು ಆಗಾಗ ಭೇಟಿ ಮಾಡಿ ಹೋಗುತ್ತಾರೆ. ಪತ್ರಗಳನ್ನು ಬರೆಯುವುದೇ ಮರೆಯುತ್ತಿರುವಾಗ ವಿವಿಧ ದೇಶಗಳಿಂದ ಪೋಸ್ಟ್ ಕಾರ್ಡುಗಳು ಅದರಲ್ಲಿನ ಅಕ್ಷರಗಳು, ಚಿತ್ರಗಳು ಮನಸ್ಸಿಗೆ ಮುದನೀಡುತ್ತವೆ' ಎನ್ನುತ್ತಾರೆ ಹೆಲನ್.

'ವಯಸ್ಸಾದ ನಾನು ಮತ್ತು ನನ್ನಂಥಹವರು ನಮ್ಮದೇ ಪುಟ್ಟ ಪ್ರಂಚದಲ್ಲಿ ಬದುಕುತ್ತಿದ್ದೇವೆ. ಕೆಲಸವಾಗಲೀ, ಚಟುವಟಿಕೆಯಾಗಲೀ ಇಲ್ಲದ ನನಗೆ ಈ ಹವ್ಯಾಸ ಕ್ರಿಯಾಶೀಲವಾಗಿರುವಂತೆ ಮಾಡಿದೆ. ಯಾವ್ಯಾವುದೋ ದೇಶದಿಂದ ಬರುವ ಕಾರ್ಡ್ ಮೂಲಕ ಅವರ ಬದುಕು, ಜನಜೀವನ, ಕುಟುಂಬ, ಕೆಲಸದ ಬಗ್ಗೆ ತಿಳಿದುಕೊಳ್ಳುವುದು ಆಸಕ್ತಿಕರವಾಗಿದೆ. ಪೋಸ್ಟ್ ಕಾರ್ಡ್ ಮೇಲಿರುವ ಚಿತ್ರವನ್ನು ನೋಡುತ್ತಾ ನಾನು ಮನಸಿನಲ್ಲಿಯೇ ಆಯಾ ಸ್ಥಳಗಳಿಗೆ ಪುಟ್ಟ ಪ್ರವಾಸ ಮಾಡುತ್ತೇನೆ. ಊಹಾಪ್ರಪಂಚದಲ್ಲಿ ಸುತ್ತಾಡುವುದು ಬಲು ಚೆನ್ನ. ಅದಕ್ಕಾಗಿಯೇ ನಾನು ಕಾರ್ಡ್‌ಗಳಿಗಾಗಿ ಕುತೂಹಲದಿಂದ ಕಾಯುತ್ತೇನೆ. ಹಕ್ಕಿ, ನಾಯಿ, ಆಯಾ ದೇಶದ ಪ್ರಮುಖ ಸ್ಥಳಗಳ ಚಿತ್ರಗಳೆಂದರೆ ನನಗೆ ಬಹಳ ಇಷ್ಟ' ಎಂದು ಅಜ್ಜಿ ಹೇಳುತ್ತಾರೆ.

ನಿಮಗೂ ಆ ಅಜ್ಜಿಗೊಂದು ಪೋಸ್ಟ್ ಕಾರ್ಡ್ ಕಳಿಸಿ ಆಕೆ ಮತ್ತು ಆಕೆಯ ಜೊತೆಗಾರರಾದ ಇತರ ಹಿರಿಯರ ನೆರಿಗೆಯ ಮುಖದಲ್ಲಿ ಮಂದಹಾಸ ಮೂಡಿಸುವ ಆಸೆಯಿದೆಯಾ? ಹಾಗಿದ್ದರೆ ಹೆಲನ್ ಅಜ್ಜಿಯ ವಿಳಾಸ ಇಲ್ಲಿದೆ. ಆಕೆ ಎಲ್ಲರಿಗೂ ಉತ್ತರಿಸಲಾರಳು. ನಾವು ಕಳುಹಿಸುವ ಸುಂದರ ಕಾರ್ಡುಗಳನ್ನು ಕೆರೋಲಿನ್ ಮತ್ತು ಸಂಸ್ಥೆಯ ನಿರ್ದೇಶಕಿ ವ್ಯಾಲರಿ ಒಪ್ಪವಾಗಿ ಜೋಡಿಸಿ ಪ್ರದರ್ಶಿಸುವರು. ನಮ್ಮ ಊರಿನ, ವಿವಿಧ ಸಂಗತಿಗಳ ಬಗ್ಗೆ ಅವರೆಲ್ಲ ಚರ್ಚಿಸುವರು. ತಡ ಯಾಕೆ, ಹಿರಿಯರ ಸಂತೋಷಕ್ಕೆ ನಾವು ಕಾರಣವಾಗೋಣ, ಬನ್ನಿ ಪೋಸ್ಟ್ ಕಾರ್ಡ್ ಕಳಿಸೋಣ.

ವಿಳಾಸ: ATTN: Valarie, TO: Helen & Friends, 8300 NW Barry Rd, Kansas City, MO 64153, USA

■